ಹಾದು ಹೋಗಬೇಕು. ಮಗ ಡೇವಿಡ್ ಸವಿಯುತ್ತಿದ್ದ ಪ್ಯಾನ್ ಕೇಕನ್ನು ನೋಡಿದ.

"ಮಮ್ಮಿ, ನನಗೂ ಪ್ಯಾನ್ ಕೇಕ್ ಬೇಕು. ಕೊಡಿಸು."

ತಾಯಿ ಹೇಳಿದಳು, "ಇಲ್ಲಿ ಬೇಡ. ಮ್ಯಾಕ್ ಡೊನಾಲ್ಡ್‌ಗೆ ಹೋಗೋಣ. ಅಲ್ಲಿ ಕೊಡಿಸ್ತೀನಿ ಬಾ." ಡೇವಿಡ್‌ಗೆ ಅರ್ಥವಾಯಿತು. ಈ ಕೆಫೆಯಲ್ಲಿ ಪ್ಯಾನ್ ಕೇಕಿಗೆ 15 ಡಾಲರ್, ಮ್ಯಾಕ್ ಡೊನಾಲ್ಡಿನಲ್ಲಿ ಕೇವಲ 4 ಡಾಲರ್. ಮಗ ಹಟ ಹಿಡಿದ. "ನಂಗೆ ತುಂಬಾ ಹಸಿವು" ಎಂದು ಅಳ ತೊಡಗಿದ ಅವನನ್ನು ಆಕೆ ರಟ್ಟೆ ಹಿಡಿದು ಎಳೆದಳು.

ಡೇವಿಡನಿಗೆ ಅಯ್ಯೋ ಎನಿಸಿತು. ಹುಡುಗನ ಮೇಲೆ ಕನಿಕರ ಮೂಡಿ "ಹಲೋ, ನಿನ್ನ ಹೆಸರೇನು?" ಎಂದು ಕೇಳಿದ. "ನನ್ನ ಹೆಸರು ಸ್ಯಾಮ್" ಎಂದ ಹುಡುಗ. "ಇಲ್ಲಿ ಕೂತ್ಕೋ ಬಾ, ನಾನು ಪ್ಯಾನ್ ಕೇಕ್ ಕೊಡಿಸ್ತೀನಿ" ಇದನ್ನು ಕೇಳಿಸಿಕೊಂಡ ಹೆಂಗಸು ಕುಪಿತಳಾಗಿ ಮಗನನ್ನು ಎಳೆಯಲೆತ್ನಿಸಿದಳು. ಆಗ ಕಂಕುಳಿನಲ್ಲಿದ್ದ ಮಗು ಚೀರಿತು. ಕೆಫೆಯಲ್ಲಿದ್ದವರೆಲ್ಲಾ ಅತ್ತ ನೋಡಿದರು. ಸಮಾಧಾನ ಮಾಡಲು ಮಗುವೊಂದಿಗೆ ಅವಳು ಹೊರಗಡೆ ಹೋದಳು. ಇತ್ತ ಡೇವಿಡ್ ಮತ್ತೊಂದು ಪ್ಯಾನ್ ಕೇಕನ್ನು ಆರ್ಡರ್ ಮಾಡಿ ಸ್ಯಾಮಿಗೆ ತಿನ್ನುವಂತೆ ಹೇಳಿದ. ಅವನು ತಿಂದು ಹಿಗ್ಗಿದ ವೇಳೆಗೆ ತಾಯಿ ಹಿಂತಿರುಗಿದಳು. ನೇರ ಮ್ಯಾನೇಜರನ ಬಳಿ ಹೋಗಿ ಏನೋ ಕೇಳಿದಳು. ನಂತರ ಡೇವಿಡ್‌ನ ಬಳಿ ಬಂದು, "ಥ್ಯಾಂಕ್ಸ್ ನಿಮಗೆ. ಹಾಗೆ ಮಾಡುವ ಆವಶ್ಯಕತೆ ಇರಲಿಲ್ಲ. ನಿಮ್ಮನ್ನು ಮತ್ತೆ ನೋಡುತ್ತೇನೆ" ಎಂದು ಮಗ ಮತ್ತು ಮಗುವಿನೊಂದಿಗೆ ಅಲ್ಲಿಂದ ತೆರಳಿದಳು.

"ಮತ್ತೆ ನೋಡುತ್ತೇನೆ" ಎಂಬ ವಾಕ್ಯ ಇವನಲ್ಲಿ ನೆಟ್ಟಿತು. ಏಕಪ್ಪ? ಎಂದುಕೊಂಡ. ಅವಳ ಬಗ್ಗೆ ಯೋಚನೆ ಪ್ರಾರಂಭವಾಯಿತು. ಅವಳು ಯಾರಿರಬಹುದು? ನಿರ್ಗತಿಕಳೇ? ಕಳ್ಳಿಯೇ? ಅಥವಾ? ಕೆಫೆಯ ಬಳಿ ಏಕೆ ಬಂದಿದ್ದಳು? ನಾನಾಗಿಯೇ ಪ್ಯಾನ್ ಕೇಕ್ ಕೊಡಿಸಿದರೆ ಬೇಡ ಎಂದೇಕೆ ಹೇಳಿದಳು. ಊಹೆ ಗರಿಕೆದರಿತು. ಕಥೆಗಳನ್ನು ಕಟ್ಟುತ್ತಾ ಹೋದ.

ಅದಾದನಂತರದ ಎರಡು ದಿನ ಆಕೆ ಕಾಣಿಸಿಕೊಳ್ಳಲಿಲ್ಲ. ಇವನ ಬರಹವೂ ಮುಂದುವರೆಯಲಿಲ್ಲ. ಮೂರನೆಯ ದಿನ ಆಕೆ ಮಗುವಿನೊಂದಿಗೆ ಬಂದಳು, ಮಗ ಸ್ಯಾಮ್ ಇರಲಿಲ್ಲ. ಬಂದವಳೇ ಇವನೆಡೆ ಬಂದು ಹತ್ತು ಡಾಲರಿನ ಒಂದು ನೋಟು ಮತ್ತು ಐದರ ಮತ್ತೊಂದನ್ನು ಅವನ ಮುಂದೆ ಇಟ್ಟು, "ದಯವಿಟ್ಟು ತೆಗೆದುಕೊಳ್ಳಿ" ಎಂದಳು. ಬೆಚ್ಚಿಬಿದ್ದ ಡೇವಿಡ್.

"ಬೇಡ, ಬೇಡ, ನನ್ನ ಖುಷಿಗಾಗಿ, ಪ್ಯಾನ್ ಕೇಕ್ ಕೊಡಿಸಿದೆ, ಅಷ್ಟೆ. ನೀನು ಹಣ ಕೊಡುವ ಆವಶ್ಯಕತೆ ಇಲ್ಲ."

"ಹಾಗಲ್ಲ, ಅದು ನನ್ನ ಸ್ವಾಭಿಮಾನದ ಪ್ರಶ್ನೆ. ನೀವೇಕೆ ನನ್ನ ಮಗನಿಗೆ ಕೊಡಿಸಬೇಕು?"

"ನಾನು ಒಬ್ಬ ಹುಡುಗನಿಗೆ ಪ್ಯಾನ್ ಕೇಕ್ ಕೊಡಿಸಬಾರದೆ?"

ಬಲವಂತ ಮಾಡಿ ಹಣವನ್ನು ಹಿಂತೆಗೆದುಕೊಳ್ಳುವಂತೆ ಮಾಡಿದ ಡೇವಿಡ್. ಹೆಂಗಸು ಮುಂದುವರೆಸಿದಳು.

"ನೀವಾರು ಎಂದು ಕೇಳಬಹುದೇ?"

"ನಾನು ಡೇವಿಡ್ ಬೆಲ್ಮೋರ್, ಒಬ್ಬ ಲೇಖಕ."

"ದಿನಾ ಇಲ್ಲಿ ಬಂದು ಬರೆಯುತ್ತೀರಾ ಹಾಗಾದರೆ?"

"ಕೆಲವು ಬಾರಿ ದಿನವಿಡೀ ಬರೆಯುತ್ತೇನೆ, ಆದರೆ ಕೆಲವೊಮ್ಮೆ ಒಂದೆರಡು ಸಾಲು ಬರೆದರೆ ಜಾಸ್ತಿ."